ಯುಗಾದಿ ಪ್ರಬಂಧ ಸ್ಪರ್ಧೆ 2025

ತೀರ್ಪುಗಾರರು ಮೆಚ್ಚಿದ ಪ್ರಬಂಧ

◆ ಬ್ಯಾಡರಹಳ್ಳಿ ಶಿವರಾಜ್
ಕಲೆ: ಸಂತೋಷ್ ಸಸಿಹಿತ್ಲು

# ನಡಿಗೆಯ ನೆಂಟ

ತಲೆಗೆ ಹ್ಯಾಟು, ಕಾಲಿಗೆ ಬೂಟ್ ಅಥವಾ ಮಿರಮಿರನೆ ಮಿಂಚುವ ಎಕ್ಕಡ ಧರಿಸಿರುವ ಹುಡುಗ ಹುಡುಗಿಯರು ಕಂಡರೆ ಮತ್ತೊಮ್ಮೆ ಕಣ್ಣರಳಿಸಿ ನೋಡುವ ತವಕ ನನಗೆ ಬಾಲ್ಯದಿಂದಲೂ ಇದೆ. ಕಾರಣ ಈ ಸೌಕರ್ಯಗಳು ಆ ವಯಸ್ಸಿಗೆ ನನಗೆ ಇರಲಿಲ್ಲ. ಹಲವು ಕೊರತೆಗಳ ನಡುವೆಯೇ ಬೆಳೆದು ಬಂದ ನಾನು ಹೀಗೆ ನೋಡುತ್ತಿದ್ದುದು ಆಗಿನ ಪೀಟಿ ಮೇಸ್ಟ್ರುಗಳನ್ನು ಮಾತ್ರ. ಜೋಡು, ಚಪ್ಪಲಿ, ಮೆಟ್ಟು, ಕಾಲ್ಮರಿ, ಚಡಾವು, ಹೀಗೆ ಒಂದೊಂದು ಕಡೆಯಲ್ಲಿ ಒಂದೊಂದು ರೀತಿಯಲ್ಲಿ ಕರೆಯುವ ಕಾಲಿಗೆ ರಕ್ಷಣೆ ಕೊಡುವ ಚಪ್ಪಲಿಯ ಜೊತೆಗಿನ ಸಂಬಂಧ ತಳವರ್ಗದ ಅಸ್ಪೃಶ್ಯತೆಗೆ ಅಂಟಿಕೊಂಡಿದೆ. ಆದರೂ ಈ ಅನುಬಂಧ ನಮಗೆಲ್ಲ ದೊಡ್ಡದು.

ಪ್ರಾಣಿಗಳ ಹೊರತುಪಡಿಸಿ ನಾಡುಗಳಲ್ಲಿ ವಾಸಿಸುವ ಮಾನವರು ಚಪ್ಪಲಿಗಳನ್ನು ತೊಡುತ್ತಾ ಬಂದಿದ್ದಾರೆ. ಇದರಲ್ಲಿ ಒಬ್ಬರದು ಒಂದೊಂದು ತೆರನಾಗಿದ್ದರೆ ನಾನು ನೋಡಿದ ನೋಟವೇ ಬೇರೆ. ಹೈಸ್ಕೂಲ್‌ವರೆಗೂ ಚಪ್ಪಲಿಯನ್ನು ಕಾಣದ ನನ್ನ ಕಾಲುಗಳು ಭೂಮಿತಾಯನ್ನು ತುಂಬಾ ಕರುಣೆಯಿಂದ ನೋಡಿದ್ದವು. ಜೀವಜಾಲಗಳ ಬಗ್ಗೆ ಮರುಕವಿತ್ತು. ನನ್ನ ಕಾಲುಗಳು ಅಹಿಂಸೆಯ ದಾರಿಯಲ್ಲಿ ಸಾಗುತ್ತಿದ್ದವು ಜೈನ ಮುನಿಗಳಂತೆ. ಮುಳ್ಳು ಹೊಕ್ಕರೂ ಅನುಭವಿಸುತ್ತಿದ್ದ ಯಾತನೆ ಬೇರೆಯೇ ಆಗಿತ್ತು. ಚಡ್ಡಿ, ಪೆನ್ನು, ಅಂಗಿ ಹೊಲಿಸಿಕೊಳ್ಳಲು ದುಂಬಾಲು ಬಿದ್ದು, ಸಾಹಸಪಟ್ಟು ಪಡೆದುಕೊಳ್ಳುತ್ತಿದ್ದ ನನಗೆ 'ಚಪ್ಪಲಿ ಬೇರೆ ಕೇಡು' ಎಂಬುದು ಅಪ್ಪನ ತಾತ್ಸಾರವಾಗಿತ್ತು. ಜೊತೆಗೆ ಖಾಲಿ ಜೋಬುಗಳ ದೊಡ್ಡ ಅಂಗಿ. ಕೊರತೆಯೋ ಒರತೆಯೋ ಆಗಿನ್ನೂ ತಿಳಿವಳಿಕೆ ಕಮ್ಮಿ ಇಬ್ಬರಿಗೂ.

ಅಕ್ಷರದ ಅರಿವಿಗೆ ಶಾಲೆಗೆ ಸಾಗಲು ಕಲ್ಲುಮುಳ್ಳುಗಳನ್ನು ತುಳಿದು ಹೋಗಲೇಬೇಕಿತ್ತು, ಕನಸು ಚಿಗುರೊಡೆಯುವ ಕಾಲ. ಗುಡ್ಡ, ಹೊಲ, ತೋಟಗಳಿಗೆಲ್ಲ ಎಗರಿ ಹತ್ತುವ ಹುಮ್ಮಸ್ಸು. ಚಪ್ಪಲಿ ಇಲ್ಲದಿದ್ದರೂ ಆರಾಮಾವಾಗಿಯೇ ನಡೆದು ಹೋಗುತ್ತಿದ್ದ ನನ್ನ ಕಾಲಿಗೆ ಬುದ್ಧಿ ಬಂದ ಮೇಲೂ ಚಪ್ಪಲಿ ಭಾಗ್ಯ ಇರಲಿಲ್ಲ.

ನಮ್ಮ ಬೀದಿಯಲ್ಲಿ ಒಮ್ಮೆ ಹುಡುಗರು ಬುಗುರಿ ಆಡಿಸುತ್ತಾ ನಿಂತ ಜನರೆದುರು 'ಬೇತಾಳಿ ಎಕ್ಕಡದಲಿ ಹೊಡೆದು ಜಾತಿ ಕುಲ ಕೆಡಿಸಿಬಿಡ್ತೀನಿ' ಅಂತ ಕತ್ತಿನ ಪಟ್ಟಿ ಹಿಡ್ಕೊಂಡು 'ಕೊಡು ಬಡ್ಡಿಮಗನೆ' ಎಂದು ಗೌಡನ ಕಡೆಯ ಸಾಲ ವಸೂಲಿದಾರರು ಅಬ್ಬರಿಸುತ್ತಿದ್ದರೆ, ನಮಗೆಲ್ಲ ಭಯ, ಅಚ್ಚರಿ. ಬೇತಾಳಿ ಎಂದರೆ ಯಾರು? ಅವನ ಎಕ್ಕಡ ಹೇಗಿರುತ್ತದೆ? ಹೀಗೆ ನಾನಾ ಪ್ರಶ್ನೆಗಳಿಂದ ಗಾಬರಿಯಾಗಿತ್ತು. ಜೊತೆಗೆ ಅದು ಯಾವ ಕಂಪನಿಯದು, ಆಕಾರ, ಬಣ್ಣ ಹೇಗೆ ಇರಬಹುದು ಎಂದು ಆಸೆಯ ಕಣ್ಣುಗಳಿಂದ ಬಣ್ಣದ ಬುಗುರಿಗೆ ಮತ್ತೆ ದಾರ ಸುತ್ತುತ್ತಿದ್ದೆವು. ಆ ಬುಗುರಿಗಳು ಗಿರಗಿರನೆ ತಿರುಗಿ ತಲೆ ಬಾಗಿಸುತ್ತಾ ಇನ್ನೆಲ್ಲೋ ಉರುಳುತ್ತಿದ್ದವು. ಗುನ್ನ ಬಿದ್ದ ಬುಗುರಿಯ ವಾರಸುದಾರ ಕಂಪನಕ್ಕೆ ಒಳಗಾಗುತ್ತಿದ್ದ. ತನ್ನ ಹೆಜ್ಜೆಗುರುತುಗಳಿಂದಲೇ ಗುರುತಾಗಿದ್ದ ಸುಬ್ಬಣ್ಣ ಜರ್... ಜರ್... ಎಂದು ತನ್ನ ಕಾಲ್ಮರಿಯನ್ನು ಎಳೆದುಕೊಂಡು ಬಂದವನೇ ಏನೋ ಹೇಳಿ ಜಗಳ ಬಿಡಿಸಿದನು. ಅಂತೂ ಚಪ್ಪಲಿ ಏಟು ತಪ್ಪಿಸಿಕೊಂಡ ಊರಿನ ಮರಿಸ್ವಾಮಿ ಬೇತಾಳಯ್ಯನ ಚಪ್ಪಲಿ ಯಾಕೆ ವಸ್ತುವಾಯಿತು ಎಂಬುದನ್ನು ಬಲ್ಲವನಾಗಿದ್ದ.

ಹೊಲದಲ್ಲಿ ಉಳುಮೆ ಮಾಡುವಾಗ ಕಾಲಿಗೆ ಗಾಜು ಹೊಕ್ಕಿ ಚಪ್ಪಲಿ ಧರಿಸಲು ನಿರ್ಧರಿಸಿದ್ದೇ ಮರಿಸ್ವಾಮಿಗೆ ಬೈಗುಳ ಬರಲು ಅಸಲಿ ಕಾರಣವಾಗಿತ್ತು. ಚಪ್ಪಲಿಗಾಗಿ ಸಾಲ ಮಾಡಿದ್ದ. 250 ರೂಪಾಯಿ ಪಡೆದುಕೊಂಡು ಆರು ತಿಂಗಳಾದರೂ ಹಣ ವಾಪಸ್ ಮಾಡದಿದ್ದಾಗ ಊರ ಗೌಡ ಆಳನ್ನು ಕಳಿಸಿದ್ದ. ಬೀದಿಯಲ್ಲಿ ಬುಗುರಿ ಆಡುತ್ತಿದ್ದ ಹುಡುಗರ ಮುಂದೆ ಬೀಡು ಬೀಸಾಗಿ ಬೀಡಿ ಸೇದುತ್ತಿದ್ದ ಮರಿಸ್ವಾಮಿಗೆ ಏಕಾಏಕಿ ಕತ್ತಿನ ಪಟ್ಟಿಗೆ ಕೈ ಹಾಕಿ ಹಲ್ಕಾ ಮಾತುಗಳನ್ನು ಉದುರಿಸುತ್ತಾ, ನಿನಗೆ ಆ ಬೇತಾಳಿ ಯಕ್ಕಡದಲ್ಲಿ ಹೊಡೀತಾರೆ ಬಾ ನಮ್ ಸಾವಕಾರು ಎಂದು ಆಳು ಧಮಕಿ ಹಾಕುತ್ತಿದ್ದರೆ ಮರಿಸ್ವಾಮಿ ಏದುಸಿರು ಡಡಡಬಿಡುತ್ತಿದ್ದ. ನೋಡುತ್ತಿದ್ದವರೆಲ್ಲ 'ಬಿಟ್ ಬಿಡಣ್ಣಾ ಹೋಗ್ಲಿ ಬಡವ, ಕಾಲ್ ಬೇರೆ ಏಟ್ ಮಾಡ್ಕೊಂಡವನೇ' ಅಂತ ಸಮಾಧಾನ ಮಾಡುತ್ತಿರುವಾಗ ನಲ್ಲಿತಾವು ನೀರಿಡಿಯುತ್ತಿದ್ದ ಕೆಂಚಿಗೆ ಯಾರೋ ಬಂದು 'ನಿನ್ ಗಂಡನಿಗೆ ಆ ಗೌಡನ ಕಡೆಯವರು ಹೊಡಿತಿದ್ದಾರೆ' ಅಂದದ್ದೇ ತಡ ದಾಪುಗಾಲಿಡುತ್ತಾ ಒಂದೇ ಸಮಕ್ಕೆ ಹಾರಿ ಬಂದುಬಿಟ್ಟಳು.

